## ಏರ್‌ಪೋರ್ಟ್ ಅಥಾರಟಿ ಆಫ್ ಇಂಡಿಯ ಸಿಬ್ಬಂದಿಗೆ ಸಿ ಬಿ ಐ ಮೊಕದ್ದಮೆಯಲ್ಲಿ ಶಿಕ್ಷೆ

**ಬೆಂಗಳೂರು :ನವೆಂಬರ್ 08,2005**

ಬೆಂಗಳೂರಿನಲ್ಲಿ ಸಿ ಬಿ ಐ ಮೊಕದ್ದಮೆಗಳ ವಿಶೇಷ ನ್ಯಾಯಾಧೀಶರಾದ ಶ್ರೀ ಪಿ ಕೃಷ್ಣ ಭಟ್‌ರವರು ಕೊಯಂಬತ್ತೂರು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಲ್ಲಿ ಕಿರಿಯ ಕಾರ್ಯಾಲಯ ಸಹಾಯಕರಾಗಿದ್ದ ಶ್ರೀ ಎಸ್.ಶಾಂತ ಕುಮಾರ್‌ಗೆ ಪ್ರತಿಯೊಂದು ಅಪರಾಧಕ್ಕು ತಲಾ 5000 ರೂಪಾಯಿಗಳ ಜುರ್ಮಾನೆ ಹಾಗೂ ಎರಡು ವರ್ಷಗಳ ಸರಳ ಸೆರೆವಾಸವನ್ನು ವಿಧಿಸಿದ್ದಾರೆ . ಆಪಾದಿತನು ನಕಲಿ ದಸ್ತಾವೇಜನ್ನು ಅಸಲಿಯೆಂದು ಮಂಡಿಸಿದ್ದರು .ಇದಲ್ಲದೆ ವಂಚನೆಯ ಪ್ರಯತ್ನಕ್ಕಾಗಿ ಆರು ಮಾಸಗಳ ಸರಳ ಸೆರೆವಾಸ ಹಾಗೂ 1000 ರೂಪಾಯಿ ದಂಡವನ್ನು ಸಹ ವಿಧಿಸಲಾಗಿದೆ .ಕ್ರಿಮಿನಲ್ ದುರ್ವರ್ತನೆ ಆಪಾದನೆಯಿಂದ ಅವರನ್ನು ಮುಕ್ತಗೊಳಿಸಲಾಗಿದೆ.

1998 ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರು ವಿಮಾನ ನಿಲ್ದಾಣದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಲ್ಲಿ ಕಿರಿಯ ಸಹಾಯಕನಾಗಿ ಕಾರ್ಯವಹಿಸುತ್ತಿದ್ದ ಶ್ರೀ ಶಾಂತ ಕುಮಾರ್ ತಮ್ಮ ಕಚೇರಿಯ ವಾಹನ ಚಾಲಕ ಶ್ರೀ ಎ. ಆರೋಕ್ಯದಾಸ್ ಎಂಬವರ ನಾಮಕರಣ ಪತ್ರ(ನೊಮಿನೇಷನ್)ವನ್ನು ನಕಲುಗೊಳಿಸಿ ಆರೋಕ್ಯದಾರ್‌ರವರ ಬದಲು ಇವರೇ ನಕಲಿ ಸಹಿಯನ್ನು ಹಾಕುವ ಮೂಲಕ ಬೆನೊವಲೆಂಟ್ ನಿಧಿ, ಸಮೂಹ ಉಳಿತಾಯ ಹಾಗೂ ಜೀವ ವಿಮೆ ಆಧಾರಿತ ಯೋಜನೆಗಳ ಆದಾಯವನ್ನು ಆರೋಕ್ಯದಾಸ್‌ರವರ ಧರ್ಮಪತ್ನಿ ಶ್ರೀಮತಿ ಎಂ .ವಿಜಯ ಯವರಿಗೆ ಸಲ್ಲುವ ಬದಲು ತಾಯಿ ಧನಲಕ್ಷ್ಮಿ ಎಂದು ಪ್ರತ್ಯೇಕವಾಗಿ ದಾಖಲೆ ಸೃಷ್ಟಿಸಿ ಕ್ರಮವಾಗಿ ಅವರಿಬ್ಬರಿಗೂ 25:75 ಅನುಪಾತದಲ್ಲಿ ಹಂಚುವ ವಿವರಗಳನ್ನು ಸೃಷ್ಟಿಸಿದ್ದರು .

*******

ಪಚ : ಸು: ಆ:ಕ : ಬೆಂ : 17 :30 08–11–2005